

ಹೋಟೆಲ್‌ಗಳ ಮೆನುವಿನಲ್ಲಿನ ತಿನಿಸುಗಳ ಪಟ್ಟಿಯಂತೆ ‘ಬ್ಯೂಟಿ ಗ್ಯಾರೇಜ್’ನಲ್ಲೂ ಥರಾವರಿ ಸೌಂದರ್ಯ ಚಿಕಿತ್ಸೆಯ ಉದ್ದನೆ ಲಿಸ್ಟು! ‘ಕಾಸ್ಮೆಟಿಕ್ ಸರ್ಜರಿ’ ಹೆಸರಿನಲ್ಲಿ ದೇಹದ ಓರೆಕೋರೆಗಳನ್ನು ತಿದ್ದುವ, ಸೌಂದರ್ಯಕ್ಕೆ ಹೊಸ ಭಾಷ್ಯ ಬರೆಯುವ ‘ಬ್ಯೂಟಿ ಬ್ರಹ್ಮ’ರಿಗೆ ಬೇಡಿಕೆ ನಿಧಾನವಾಗಿ ಹೆಚ್ಚುತ್ತಿದೆ. ಅಪಘಾತ ಮತ್ತು ಆಕಸ್ಮಿಕ ಘಟನೆಗಳಲ್ಲಿ ದೇಹದ ಸ್ವರೂಪಕ್ಕೆ ಧಕ್ಕೆಯಾದಾಗ ವರದಂತೆ ಕಾಣಿಸುವ ವೈದ್ಯಕೀಯ ಚಿಕಿತ್ಸೆ, ವ್ಯಾಪಾರಿ ಧೋರಣೆಯಿಂದಾಗಿ ಗ್ಯಾರೇಜ್ ಸ್ವರೂಪ ಪಡೆದುಕೊಂಡಿದೆ. ಕೆಲವು ವರ್ಷಗಳ ಹಿಂದೆ ಸಿನಿಮಾ ಮಂದಿಗೆ ಸೀಮಿತ ಎನ್ನುವಂತಿದ್ದ ಸುರೂಪ ಚಿಕಿತ್ಸೆ ಈಗ ಮಧ್ಯಮವರ್ಗದ ಬದುಕುಗಳಲ್ಲೂ ಇಣುಕುತ್ತಿದೆ. ಏನಿದು ಸೌಂದರ್ಯ ಚಿಕಿತ್ಸೆ? ಯಾರಿಗಾಗಿ, ಯಾವುದಕ್ಕಾಗಿ ಈ ಚಿಕಿತ್ಸೆ? ಸೌಂದರ್ಯದ ಹೆಸರಿನಲ್ಲಿ ನಡೆಯುತ್ತಿರುವ ಈ ಚಿಕಿತ್ಸೆಗಳು ದಂಧೆಯ ರೂಪ ಪಡೆದಿವೆಯೆ? ಸ್ಮಾರ್ಟ್ ಫೋನ್ ಯುಗದ ತರುಣ ತರುಣಿಯರ ಅಂತರಂಗ ಬಹಿರಂಗದ ತವಕತಲ್ಲಣಗಳ ಕಥನವಿದು.

■ ಡಾ. ಗುರುಪ್ರಸಾದ್ ಕಾಗಿನೆಲೆ

ಲೇಖಕರು ಅಮೆರಿಕದಲ್ಲಿ ವೈದ್ಯರು. ದೇಹತಿದ್ದುವ ಶಸ್ತ್ರಚಿಕಿತ್ಸೆಯನ್ನೇ ಕೇಂದ್ರವಾಗಿಟ್ಟುಕೊಂಡು ‘ಕಾಯಾ’ ಎಂಬ ಕಾದಂಬರಿ ರಚಿಸಿದ್ದಾರೆ.

## ಇಲ್ಲಿ ಬಾಡಿ ರಿಪೇರಿ ಮಾಡಲಾಗುತ್ತದೆ - ಮೂಗು, ತುಟಿ, ಕಟಿ, ಎದೆ, ಚರ್ಮ, ಹೊಟ್ಟೆಯ ಟೈರು...

